ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ

ದಿನಾಂಕ : DATE 27/3/2021

# ಬಿಗಿಯಾಯ್ತು ಸಿಡಿ ಹಿಡಿತ

## ಎಫ್ಐಆರ್ ದಾಖಲು | ರಮೇಶ್ ಜಾರಕಿಹೊಳಿಗೆ ಸಂಕಷ್ಟ

■ ವಿಜಯವಾಣಿ ಸುದ್ದಿಜಾಲ ಬೆಂಗಳೂರು 27-3-21

ಮಂತ್ರಿಸ್ಥಾನ ಕಸಿದುಕೊಂಡಿರುವ ಅಶ್ಲೀಲ ಸಿಡಿ ಪ್ರಕರಣವೀಗ ಶಾಸಕ ರಮೇಶ್ ಜಾರಕಿಹೊಳಿಗೆ ಬಂಧನದ ಭೀತಿ ಹುಟ್ಟಿಸಿದೆ. ಶುಕ್ರವಾರ ವಿಡಿಯೋದಲ್ಲಿ ದಿಢೀರ್ ಕಾಣಿಸಿಕೊಂಡ ಯುವತಿ ತನ್ನ ವಕೀಲರ ಮೂಲಕ ರಮೇಶ್ ಜಾರಕಿಹೊಳಿ ವಿರುದ್ಧ ದೂರು ಕೊಟ್ಟಿದ್ದಾಳೆ. ಈ ಸಂಬಂಧ ಕಬ್ಬನ್‌ಪಾರ್ಕ್ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ಈ ಮಧ್ಯೆ, ಕುಟುಂಬ ಸದಸ್ಯರ ಜತೆ ಯುವತಿ ಮಾತನಾಡಿದ್ದಾಳೆಂದು ಹೇಳಲಾದ ಆಡಿಯೋ ಬಿಡುಗಡೆಯಾಗಿದ್ದು ಅದರಲ್ಲಿ ಕಾಂಗ್ರೆಸ್ ಮುಖಂಡ ಡಿ.ಕೆ.ಶಿವಕುಮಾರ್ ಹೆಸರು ಪ್ರಸ್ತಾಪವಾಗಿದೆ. ಈ ಬೆಳವಣಿಗೆಯಿಂದಾಗಿ ಸಿಡಿ ಸ್ಫೋಟದ ಹಿಂದಿರುವ 'ಮಹಾನಾಯಕ'ನ ಚರ್ಚೆ ಮತ್ತೆ ಮುನ್ನೆಲೆಗೆ ಬಂದಿದೆ.



### ಇಂದು ದೊಡ್ಡ ಬಾಂಬ್ ರಿಲೀಸ್

**ದೊಡ್ಡ ಬಾಂಬ್ ಇದೆ. ನಾಳೆ (ಶನಿವಾರ) ಸಂಜೆ ಸಂಜೆ 4-6ರೊಳಗೆ ಬಿಡುಗಡೆಯಾಗಲಿದೆ. ಡಿಕೆಶಿ ನನ್ನ ಗೆಳೆಯ, ಆತನಿಗೆ ಒಳ್ಳೆಯದಾಗಲಿ.**

**| ರಮೇಶ್ ಜಾರಕಿಹೊಳಿ**

**ಆಡಿಯೋದಲ್ಲಿ ಡಿಕೆಶಿ ಹೆಸರು**

**ಬಂಧನ ಭೀತಿ:** ಅಧಿಕಾರ ದುರ್ಬಳಕೆ ಮಾಡಿಕೊಂಡು ಅತ್ಯಾಚಾರ ಹಾಗೂ ಲೈಂಗಿಕ ದೌರ್ಜನ್ಯ ಸೇರಿ 6 ಐಪಿಸಿ ಸೆಕ್ಷನ್‌ಗಳಡಿ ಎಫ್ಐಆರ್ ದಾಖಲಾಗಿರುವುದರಿಂದ ರಮೇಶ್ ಜಾರಕಿಹೊಳಿಗೆ ಬಂಧನ ಭೀತಿ ಶುರುವಾಗಿದೆ. ಹೀಗಾಗಿ ನಿರೀಕ್ಷಣಾ ಜಾಮೀನು ಕೋರಿ ಕೋರ್ಟ್‌ಗೆ ಅರ್ಜಿ ಸಲ್ಲಿಸುವ ಸಾಧ್ಯತೆಯಿದೆ. ಇನ್ನೊಂದೆಡೆ ಸಮ್ಮತಿ ಲೈಂಗಿಕ ಕ್ರಿಯೆ ನಡೆದಿರುವುದು ಕಾಣಿಸುತ್ತಿರುವುದು ಹಾಗೂ ಒಂದೇ ಪ್ರಕರಣದ ಸಂಬಂಧ ಹಲವು ದೂರುಗಳು ದಾಖಲಾಗಿರುವುದರಿಂದ ವಿಚಾರಣೆ ನಡೆಸಿ, ಪ್ರಬಲ ಸಾಕ್ಷ್ಯ ಸಂಗ್ರಹಿಸದೆ ಏಕಾಏಕಿ ಬಂಧಿಸುವುದಿಲ್ಲ ಎಂದು ಮೂಲಗಳು ತಿಳಿಸಿವೆ. ಮಾ.2ರಂದು ವಿಡಿಯೋ ಬಿಡುಗಡೆ ದಿನವೇ ಯುವತಿ ಕುಟುಂಬ ಸದಸ್ಯರ ಜತೆ ಮಾತನಾಡಿದ್ದಾಳೆ ಎನ್ನಲಾದ ಆಡಿಯೋ ತುಣುಕು ರಿಲೀಸ್ ಆಗಿದೆ.

●ಪುಟ 3




ಶುಕ್ರವಾರ ಬೆಂಗಳೂರಿನಲ್ಲಿ ಸಿ.ಡಿ.ಯಲ್ಲಿರುವ ಯುವತಿ ಪರವಾಗಿ ಪೊಲೀಸರಿಗೆ ದೂರು ನೀಡಿದ ವಕೀಲ ಜಗದೀಶ್.

### ಶುಕ್ರವಾರ ಏನೇನಾಯ್ತು?

- 11.30- ಯುವತಿಯ 3ನೇ ವಿಡಿಯೋ ರಿಲೀಸ್
- 12.45- ಯುವತಿ ಪರ ವಕೀಲ ಜಗದೀಶ್ ಹೇಳಿಕೆ
- 2.25- ಕಮಿಷನರ್ ಭೇಟಿ ಮಾಡಿದ ಜಗದೀಶ್
- 3.20- ಕಬ್ಬನ್ ಪಾರ್ಕ್ ಠಾಣೆಗೆ ದೂರು ವರ್ಗಾ
- 4.40- ಮಾಜಿ ಸಚಿವರ ವಿರುದ್ಧ ಎಫ್ಐಆರ್
- 6.35- ಡಿಕೆಶಿ ಹೆಸರು ಪ್ರಸ್ತಾಪಿತ ಯುವತಿ ಆಡಿಯೋ ವೈರಲ್

### ಸಾಧ್ಯಾಸಾಧ್ಯತೆ

- ನಿರೀಕ್ಷಣಾ ಜಾಮೀನು ಕೋರಿ ಜಾರಕಿಹೊಳಿ ಕೋರ್ಟ್ ಮೆಟ್ಟಿಲೇರುವ ಸಾಧ್ಯತೆ
- ಸಮ್ಮತಿ ಲೈಂಗಿಕ ಕ್ರಿಯೆಯಾಗಿರುವುದರಿಂದ ಏಕಾಏಕಿ ಪೊಲೀಸರು ಬಂಧಿಸುವುದಿಲ್ಲ
- ಯುವತಿ ಖುದ್ದು ಹಾಜರಾಗಿ ಹೇಳಿಕೆ ಕೊಡಬೇಕು. ಹೇಳಿಕೆ ಆಧರಿಸಿ ಮುಂದಿನ ಕ್ರಮ, ಯುವತಿಯನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಸ್ಥಳ ಮಹಜರು ನಡೆಸಬೇಕಾಗುತ್ತೆ
- ಯುವತಿ ಆರೋಪಕ್ಕೆ ಪೂರಕವಾಗಿರುವ ಸಾಕ್ಷ್ಯಾಧಾರ ಸಂಗ್ರಹಿಸಲಿರುವ ಪೊಲೀಸರು
- ರಮೇಶ್ ಜಾರಕಿಹೊಳಿಗೆ ವಿಚಾರಣೆಗೆ ಬರಲು ನೋಟಿಸ್, ಹೇಳಿಕೆ ದಾಖಲು
- 60 ವರ್ಷ ಆಗಿರುವುದರಿಂದ ಲೈಂಗಿಕ ಕ್ರಿಯೆ ಸಾಮರ್ಥ್ಯದ ಬಗ್ಗೆ ವೈದ್ಯಕೀಯ ಪರೀಕ್ಷೆ, ಕೇಸಿಗೆ ಸಂಬಂಧಪಟ್ಟ ಎಲ್ಲ ವ್ಯಕ್ತಿಗಳನ್ನೂ ವಿಚಾರಣೆ ನಡೆಸಿ ಹೇಳಿಕೆ ಪಡೆಯಬೇಕು
- ಯುವತಿ ಆರೋಪ, ಲಭ್ಯ ಸಾಕ್ಷ್ಯ ಆಧರಿಸಿ ಬಂಧಿಸಬೇಕೇ? ಬೇಡವೇ ಎಂಬ ತೀರ್ಮಾನ

13

### ಎಸ್ಐಟಿಯಿಂದ ಮತ್ತಷ್ಟು ಮಂದಿಯ ವಿಚಾರಣೆ ಸಾಧ್ಯತೆ

# ಬಿಗಿಯಾಯ್ತು ಸಿಡಿ ಹಿಡಿತ

ವಿ.ವಾ. 27-3-21

**ಮೊದಲನೇ ಪುಟದಿಂದ...**

ತಾಯಿ- ತಮ್ಮನ ಜತೆ ಮಾತನಾಡುವ ಸಂದರ್ಭದಲ್ಲಿ ಯುವತಿ, 2 ಬಾರಿ ಡಿ.ಕೆ.ಶಿವಕುಮಾರ್ ಹೆಸರು ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ. ಆದರೆ, ಆಡಿಯೋ ಅಸಲಿಯೋ ನಕಲಿಯೋ ಎಂಬ ಬಗ್ಗೆ ಎಸ್ಐಟಿ ತನಿಖೆ ನಡೆಸಲಿದೆ.

**3ನೇ ವಿಡಿಯೋ:** ಶುಕ್ರವಾರ ಬೆಳಗ್ಗೆ 3ನೇ ವಿಡಿಯೋ ಬಿಡುಗಡೆ ಮಾಡಿದ ಯುವತಿ, ತನ್ನ ಮೇಲಿನ ದೌರ್ಜನ್ಯ ಕುರಿತು ಪರಿಚಿತ ವಕೀಲ ಜಗದೀಶ್ ಮೂಲಕ ಲಿಖಿತ ದೂರು ನೀಡುವುದಾಗಿ ಹೇಳಿಕೆ ನೀಡಿದ್ದಳು. ಮಧ್ಯಾಹ್ನ 2.30ರ ವೇಳೆಗೆ ವಕೀಲ ಜಗದೀಶ್, ದೂರಿನ ಪ್ರತಿಯೊಂದಿಗೆ ಪೊಲೀಸ್ ಆಯುಕ್ತರ ಕಚೇರಿಗೆ ತೆರಳಿ ಕಮಲ್ ಪಂತ್ ಭೇಟಿ ಮಾಡಿ ದೂರು ನೀಡಿದ್ದರು. ಕಮಿಷನರ್ ಸಲಹೆ ಮೇರೆಗೆ ಕಬ್ಬನ್ ಪಾರ್ಕ್ ಠಾಣೆಗೆ ತೆರಳಿದ ಜಗದೀಶ್ ಅಧಿಕೃತವಾಗಿ ದೂರು ನೀಡಿದರು. ಎಫ್ಐಆರ್‌ನಲ್ಲಿ ಆರೋಪಿ ಸಾಲಿನಲ್ಲಿ ರಮೇಶ್ ಜಾರಕಿಹೊಳಿ ಹೆಸರು ಉಲ್ಲೇಖಿಸಲಾಗಿದೆ. ಈಗಾಗಲೇ ಸಿಡಿ ಪ್ರಕರಣದ ಕುರಿತು ತನಿಖೆ ನಡೆಸುತ್ತಿರುವ ಎಸ್ಐಟಿಗೆ ಯುವತಿ ನೀಡಿದ ದೂರಿನ ಪ್ರಕರಣವನ್ನೂ ವರ್ಗಾವಣೆ ಮಾಡಲಾಗಿದೆ. ಮತ್ತಷ್ಟು ಮಂದಿಯ ವಿಚಾರಣೆ ನಡೆಸಲು ಎಸ್ಐಟಿ ಸಿದ್ಧತೆ ನಡೆಸಿದೆ.

## ಯುವತಿಗೆ 6ನೇ ನೋಟಿಸ್

**ಮಾಜಿ ಸಚಿವರ ವಿರುದ್ಧ ಎಫ್ಐಆರ್ ದಾಖಲಿಸುತ್ತಿದ್ದಂತೆ ಎಸ್ಐಟಿ ಪೊಲೀಸರು, ಯುವತಿಗೆ 6ನೇ ನೋಟಿಸ್ ಜಾರಿ ಮಾಡಿದ್ದಾರೆ. ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ನೀಡಿದ ದೂರು ಆಧರಿಸಿ 5 ಬಾರಿ ನೋಟಿಸ್ ನೀಡಿದ್ದರು. ಯಾವುದಕ್ಕೂ ಯುವತಿ ಸ್ಪಂದಿಸಿರಲಿಲ್ಲ. ಇದೀಗ ವಕೀಲರ ಮೂಲಕ ಮತ್ತು ಇಮೇಲ್, ವಾಟ್ಸ್ಆ್ಯಪ್‌ನಲ್ಲಿ 6ನೇ ನೋಟಿಸ್ ನೀಡಿದ್ದಾರೆ. ಈಗಲೂ ಬಂದು ಹೇಳಿಕೆ ನೀಡದಿದ್ದರೆ ಎಫ್ಐಆರ್ ರದ್ದಾಗುವ ಸಾಧ್ಯತೆ ಹೆಚ್ಚಾಗಿದೆ.**

## ಯಾವ್ಯಾವ ಸೆಕ್ಷನ್?

- ಐಪಿಸಿ ಸೆಕ್ಷನ್ 354ಎ (ಲೈಂಗಿಕ ದೌರ್ಜನ್ಯ, ಗರಿಷ್ಠ 3 ವರ್ಷ ಜೈಲು)
- ಸೆಕ್ಷನ್ 376ಸಿ (ಅಧಿಕಾರ ದುರ್ಬಳಸಿ ಅತ್ಯಾಚಾರ, ಗರಿಷ್ಠ 5 ವರ್ಷ ಜೈಲು)
- ಸೆಕ್ಷನ್ 506 (ಜೀವ ಬೆದರಿಕೆ, 2 ವರ್ಷ ಜೈಲು)
- ಸೆಕ್ಷನ್ 504 (ನಿಂದನೆ, ಗರಿಷ್ಠ 2 ವರ್ಷ ಜೈಲು)
- ಸೆಕ್ಷನ್ 417 (ವಂಚನೆ, ಗರಿಷ್ಠ 1 ವರ್ಷ ಶಿಕ್ಷೆ)
- ಐಟಿ ಕಾಯ್ದೆಯಡಿ ಕೇಸ್ (ಸಿಡಿ ಸೋರಿಕೆ ಆರೋಪ)

ಯುವತಿ ದೂರಿನ ಮೇಲೆ ಐಪಿಸಿ ಸೆಕ್ಷನ್ 354ಎ, 376ಸಿ ಅನ್ವಯ ಎಫ್ಐಆರ್ ದಾಖಲಾಗಿರುವ ಹಿನ್ನೆಲೆಯಲ್ಲಿ ಆರೋಪಿಯನ್ನು ಪೊಲೀಸರು ಬಂಧಿಸಬೇಕಾಗುತ್ತದೆ. ನಿರ್ಭಯಾ ಕಾಯ್ದೆಯಲ್ಲಿ ಉಲ್ಲೇಖವಾಗಿರುವ ಪ್ರಕಾರ ಸಂತ್ರಸ್ತೆ ತಡವಾಗಿ ದೂರು ನೀಡುವುದು ತಪ್ಪಲ್ಲ. ದೂರು ಕೊಟ್ಟ ತಕ್ಷಣ ಎಫ್ಐಆರ್ ಮಾಡ ಬೇಕು. ಇಲ್ಲವಾದರೆ 6 ತಿಂಗಳು ಜೈಲು ಶಿಕ್ಷೆಗೆ ಒಳಗಾಗ ಬೇಕಾಗುತ್ತದೆ. ಈ ಪ್ರಕರಣದಲ್ಲಿ ತನಿಖಾ ಧಿಕಾರಿ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ನೋಡಬೇಕು.

| ಹಿರಿಯ ವಕೀಲರು

## ಜಾಮೀನು ಸಿಗುತ್ತೆ

ಐಪಿಸಿ ಸೆಕ್ಷನ್ 354ಎ ಮತ್ತು 376ಸಿ ಹಾಕಿರುವುದರಿಂದ ಪ್ರಕರಣ ಗಂಭೀರವಾಗಿದೆ. ಆದರೆ, 354ಎ ಸೆಕ್ಷನ್ ಪ್ರಕಾರ ಆರೋಪಿಗೆ ಠಾಣಾ ಜಾಮೀನು ನೀಡಲು ಅವಕಾಶವಿದೆ. 376ಸಿ ಸೆಕ್ಷನ್‌ನಡಿ ಕ್ರಮ ತೆಗೆದುಕೊಳ್ಳಲು ಯುವತಿ ತನಿಖೆಗೆ ಪೂರಕವಾಗಿ ಸ್ಪಂದಿಸಬೇಕು. ಜತೆಗೆ ಸೂಕ್ತ ಸಾಕ್ಷ್ಯಾಧಾರ ಲಭ್ಯವಾದರಷ್ಟೇ ಆರೋಪಿಯನ್ನು ಬಂಧಿಸಬೇಕಾಗುತ್ತದೆ ಎಂಬುದು ಹಿರಿಯ ಪೊಲೀಸ್ ಅಧಿಕಾರಿಗಳ ಅಭಿಪ್ರಾಯ.